ಸಿವಿಲ್ ಮಿಸಲೇನಿಯಸ್ ನಂ.13/2022
ಪಿಡಬ್ಲ್ಯು: 01

ದಿನಾಂಕ: **08-04-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಸರಕಾರಿ ವಕೀಲರಿಂದ**

1. ನನ್ನ ಊರು ಉಕ್ಕಲಿ ಗ್ರಾಮ ಇರುತ್ತದೆ. ಉಕ್ಕಲಿ ಮತ್ತು ಹೆಗಡಿಹಾಳ ಗ್ರಾಮಗಳ ಎರಡೂ ಊರು ಜಮೀನುಗಳನ್ನು ಚಿಕ್ಕ ನೀರಾವರಿ ಕೆರೆ ನಿರ್ಮಾಣಕ್ಕಾಗಿ ತೆಗೆದುಕೊಂಡಿದ್ದಾರೆ ಎಂದರೆ ಸರಿ. ಸುಮಾರು 10-15 ಜಮೀನುಗಳನ್ನು ಹೆಗಡಿಹಾಳ ಗ್ರಾಮದ ಜಮೀನುಗಳನ್ನು ತೆಗೆದುಕೊಂಡಿದ್ದಾರೆ ಎಂದರೆ ಸರಿ. ಉಕ್ಕಲಿ ಗ್ರಾಮದ ಹತ್ತು ಜಮೀನುಗಳನ್ನು ತೆಗೆದುಕೊಂಡಿದ್ದಾರೆ ಎಂದರೆ ಸರಿ. ಉಕ್ಕಲಿಯಲ್ಲಿ ನಿಮ್ಮ ಅಣ್ಣ ತಮ್ಮಂದಿರರ ಜಮೀನುಗಳ ಪೈಕಿ ಶಂಕ್ರೆಪ್ಪ ಜಂಪಣ್ಣ ರವರ ಜಮೀನುಗಳನ್ನು ತೆಗೆದುಕೊಂಡಿದ್ದಾರೆ ಎಂದರೆ ಸರಿ. ಅದೇ ರೀತಿ ಮಲ್ಲಪ್ಪ, ಶರಣಪ್ಪ ಮತ್ತು ಶಂಕ್ರೆಪ್ಪ ರವರ ಜಮೀನುಗಳನ್ನು ಸಹ ತೆಗೆದುಕೊಂಡಿದ್ದಾರೆ ಎಂದರೆ ಸರಿ. ನಿಮ್ಮ ಅಣ್ಣ ತಮ್ಮಂದಿರರ ಪೈಕಿ ದುಂಡಪ್ಪ, ಜಂಪಣ್ಣ, ನಿಂಗಪ್ಪ ತಂ. ರಾಮಪ್ಪ ಕಾಖಂಡಕಿ ರವರ ಜಮೀನುಗಳನ್ನು ಸಹ ತೆಗೆದುಕೊಂಡಿದ್ದಾರೆ ಎಂದರೆ ಸರಿ. ಶಂಕ್ರೆಪ್ಪ ತಂ. ಜಂಪಣ್ಣ ಕಾಖಂಡಕಿ ರವರ ಜಮೀನನ್ನು ಸಹ ತೆಗೆದುಕೊಂಡಿದ್ದಾರೆ ಎಂದರೆ ಸರಿ.
2. ನಿಮ್ಮ ಊರಿನವರ ಇನ್ನಿತರ ರಾಜೇಸಾಬ ಪಾಂಡುಗೋಳ, ಮಹಮ್ಮದಸಾಬ ನಾಗರದಿನ್ನಿ, ದಸ್ತಗೀರಸಾಬ ನಾಗರದಿನ್ನಿ, ಸೈಯದಬಾಷಾ ನಾಗರದಿನ್ನಿ ರವರ ಜಮೀನುಗಳನ್ನು ಸಹ ತೆಗೆದುಕೊಂಡಿದ್ದಾರೆ ಎಂದರೆ ಸರಿ. ಇಷ್ಟೆಲ್ಲಾ ಹೊಲಗಳನ್ನು ಸರಕಾರದವರು 2010 ರಲ್ಲಿ ತೆಗೆದುಕೊಂಡಿದ್ದಾರೆ ಎಂದರೆ ಸರಿ.

ಸದರಿ ಹೊಲಗಳಲ್ಲಿ ನನ್ನ ಹೊಲಗಳು ಸಹ ಇರುತ್ತವೆ. ಸರಕಾರದವರು 2010 ರಂದು ಈ ಜಮೀನುಗಳನ್ನು ತೆಗೆದುಕೊಂಡಾಗಿನಿಂದ ಸದರಿ ಜಮೀನುಗಳಲ್ಲಿ ಕೆರೆ ಮಾಡಿ ನೀರನ್ನು ನಿಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಜಮೀನುಗಳಲ್ಲಿ ಕೆರೆ ನೀರನ್ನು ನಿಲ್ಲಿಸಿದ್ದರಿಂದ, ಎಲ್ಲರೂ ಸದರಿ ನೀರನ್ನು ಉಪಯೋಗಿಸುತ್ತಾರೆ ಎಂದರೆ ಸರಿ. 2010 ರಿಂದ ನೀವು ನಿಮ್ಮ ಜಮೀನಿನ ಕಬ್ಜಾ ವಹಿವಾಟಿಯಲ್ಲಿ ಇಲ್ಲ ಎಂದರೆ ಸರಿ. 2010 ರಲ್ಲಿ ಸರಕಾರದವರು ಜಮೀನನ್ನು ತೆಗೆದುಕೊಂಡಿರುವ ಬಗ್ಗೆ ನಿಮಗೆ ಮತ್ತು ನಿಮ್ಮ ಅಣ್ಣ ತಮ್ಮಂದಿರರ ತಿಳುವಳಿಕೆಗೆ ಇದೆ ಎಂದರೆ ಸರಿ. ಸದರಿ ಜಮೀನುಗಳನ್ನು ಸರಕಾರದವರು ತೆಗೆದುಕೊಂಡಿದ್ದರಿಂದ, ನೀವು ಮತ್ತು ನಿಮ್ಮ ಅಣ್ಣ ತಮ್ಮಂದಿರರು ಪರಿಹಾರ ಹಣವನ್ನು ತೆಗೆದುಕೊಂಡಿದ್ದೀರಿ ಎಂದರೆ ಸರಿ. ನಿಮ್ಮ ಅಣ್ಣ ತಮ್ಮಂದಿರರು ಪರಿಹಾರ ಹಣವನ್ನು ಪಡೆದುಕೊಂಡಿರುವ ಬಗ್ಗೆ ನಿಮಗೆ ತಿಳುವಳಿಕೆ ಇದೆ ಎಂದರೆ ಸರಿ. ಸದರಿ ಜಮೀನುಗಳ ಬಗ್ಗೆ ಐತೀರ್ಪು ಆಗಿರುವ ಬಗ್ಗೆ 2010 ರಿಂದ ನಿಮ್ಮ ತಿಳುವಳಿಕೆಗೆ ಇದೆ ಎಂದರೆ ಮಾಹಿತಿ ಬಂದಿಲ್ಲ ಎಂದು ಉತ್ತರಿಸುತ್ತಾರೆ.

3. ಪರಿಹಾರ ಹಣ 2010 ರಲ್ಲಿ ಬಂದಿದೆ, ಅದೇ ಸಮಯದಲ್ಲಿ ನಿಮಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಸದರಿ ಹಣವನ್ನು ಪಡೆಯಲು ಯಾವಾಗ ಅರ್ಜಿ ಕೊಟ್ಟಿದ್ದೀರಿ ಎಂದರೆ ಅರ್ಜಿಯನ್ನು ಕೊಟ್ಟಿದ್ದೇನೆ, ಆದರೆ ಯಾವಾಗ ಕೊಟ್ಟಿದ್ದೇನೆ ಎಂದು ಗೊತ್ತಿಲ್ಲ. ನೀವು ಪರಿಹಾರ ಹಣವನ್ನು ಕೊಡಬೇಕೆಂದು ಸರಕಾರದವರಿಗೆ ಹತ್ತು ವರ್ಷದ ಹಿಂದೆ ಅರ್ಜಿ ಕೊಟ್ಟಿದ್ದೀರಿ

ಎಂದರೆ ಹೌದು ಎಂದು ಉತ್ತರಿಸುತ್ತಾರೆ. ಹತ್ತು ವರ್ಷದ ಹಿಂದೆಯೇ ಪರಿಹಾರ ಹಣದ ಸಂಬಂದವಾಗಿ ವಿಚಾರ ಮಾಡಿದ್ದೀರಿ ಎಂದರೆ ಸರಿ. ಪರಿಹಾರ ಹಣ ಬಂದಿರುವ ವಿಷಯ ನಿಮಗೆ ಮತ್ತು ನಿಮ್ಮ ಅಣ್ಣ ತಮ್ಮಂದಿರರಿಗೆ 2010 ರಲ್ಲಿಯೇ ಗೊತ್ತಾಗಿದೆ ಎಂದರೆ ಗೊತ್ತಾಗಿಲ್ಲ ಎಂದು ಉತ್ತರಿಸುತ್ತಾರೆ. ಈ ಎಲ್ಲ ವಿಷಯ ನಿಮಗೆ ಗೊತ್ತಿದ್ದರೂ ಸಹ, ನಿಮಗೆ ನೋಟೀಸು ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸರಕಾರದವರು ಭೂಸ್ವಾಧೀನಪಡಿಸಿಕೊಂಡ ನಂತರ ನಿಮಗೆ ನೋಟೀಸು ಜಾರಿಯಾಗಿದೆ ಎಂದರೆ ನೋಟೀಸು ಬಂದಿಲ್ಲ ಎಂದು ಉತ್ತರಿಸುತ್ತಾರೆ. ನೋಟೀಸು ನಿಮಗೆ ಜಾರಿಯಾದ ನಂತರ 2021 ರವರೆಗೆ ನೀವು ಪ್ರಶ್ನೆಯೇ ಮಾಡಿಲ್ಲ ಎಂದರೆ ನನಗೆ ಹಣ ಕಡಿಮೆ ಬಂದಾಗ, ಹೆಚ್ಚಿಗೆ ಹಣ ಬೇಕು ಎಂದು ಹಾಕಿದ್ದೇನೆ ಎಂದು ಉತ್ತರಿಸುತ್ತಾರೆ. ಸರಕಾರದವರು ನೋಟೀಸು ಕೊಡದೇ ನನ್ನ ಜಮೀನನ್ನು ತೆಗೆದುಕೊಂಡಿದ್ದಾರೆ, ಸದರಿ ಪರಿಹಾರ ಹಣ ಬಂದ ನಂತರವೇ ಸದರಿ ವಿಷಯ ನನಗೆ ಗೊತ್ತಾಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸರಕಾರದವರು ಪರಿಹಾರ ಹಣ ಘೋಷಿಸಿರುವ ಬಗ್ಗೆ ಮತ್ತು ನೋಟೀಸು ಜಾರಿಯಾದ ಬಗ್ಗೆ ನಿಮಗೆ ಗೊತ್ತಿದ್ದರೂ ಸಹ, ನಷ್ಟ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.